MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | MONDAY | 7-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ರಾಬೆಸ್ಟಾ ಕಾಫಿ ದರ 15 ತಿಂಗಳ ಕನಿಷ್ಠ ಮಟ್ಟಕ್ಕೆ, ಅರೆಬಿಕಾ 5 ಶೇಕಡಾ ಇಳಿಕೆ

ಪ್ರಮುಖ ರಾಬೆಸ್ಟಾ ಕಾಫಿ ಉತ್ಪಾದಕ ವಿಯೆಟ್ನಾಂ ನಲ್ಲಿ ಕಟಾವು ಪ್ರಾರಂಭದಿಂದ ರಾಬೆಸ್ಟಾ ಕಾಫಿ ICE ದರ 2.1 ಶೇಕಡಾ ಇಳಿಕೆಯೊಂದಿಗೆ ಟನ್‌ಗೆ $ 1842 ಆಗಿ 15 ತಿಂಗಳ ಕನಿಷ್ಠ ಮಟ್ಟವಾದ $ 1814 ಕ್ಕಿಂತ ಇಳಿಕೆ ಕಂಡಿದೆ. ಅರೆಬಿಕಾ ಕಾಫಿ ದರ 4.9 ಶೇಕಡಾ ಇಳಿಕೆ ಕಂಡಿದೆ.

## ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಹೆಚ್ಚಳ ಸಾಧ್ಯತೆ

ಮಲೇಶಿಯನ್ ಪಾಮೆಣ್ಣೆ ಅಕ್ಟೋಬರ್ 2022 ರ ಅಂತ್ಯದ ಇನ್‌ವೆಂಟರಿ ದಾಸ್ತಾನು 9.3 ಶೇಕಡಾ ಹೆಚ್ಚಳವಾಗಿ 2.53 ಮಿಲಿಯನ್ ಟನ್‌ಗಳಾಗುವ ಸಾಧ್ಯತೆಯ ವ್ಯಾಪಾರಿಗಳ ಸಮೀಕ್ಷೆ ಅಂದಾಜಿಸಿದೆಯೆಂದು ವರದಿ ಹೇಳಿದೆ. ಇದು 2019 ಎಪ್ರಿಲ್ ಬಳಿಕ ಅತಿ ಹೆಚ್ಚು ದಾಸ್ತಾನೆನ್ನಲಾಗಿದೆ. ಉತ್ಪಾದನೆ 3 ಶೇಕಡಾ ಹೆಚ್ಚಳದೊಂದಿಗೆ 1.82 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ನಿರಂತರ 5 ನೇ ಮಾಸದ ಹೆಚ್ಚಳವಾಗಿದ್ದು ನವೆಂಬರ್ ಮತ್ತು ಡಿಸೆಂಬರ್ ನಲ್ಲಿ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ರಫ್ತು 4.20 ಶೇಕಡಾ ಹೆಚ್ಚಳವಾಗಬಹುದೆನ್ನಲಾಗಿದ್ದು, ಚೈನಾಕ್ಕೆ ರಫ್ತು ಹೆಚ್ಚಳದಿಂದ ರಫ್ತು ಗಣನೀಯ ಹೆಚ್ಚಳವಾಗಲಿದೆಯೆನ್ನಲಾಗಿದೆ.

## ದಾವಣಗೆರೆ ಮಾರುಕಟ್ಟೆಯಲ್ಲಿ ಜೋಳ ದರ ಹೆಚ್ಚಳ

ಉತ್ತಮ ಮಾರುಕಟ್ಟೆಯಲ್ಲಿ ಜೋಳ ಬೇಡಿಕೆ ದರ ಹೆಚ್ಚಳ ದಾವಣಗೆರೆ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಇತರ ಮಾರುಕಟ್ಟೆಗಳಲ್ಲಿ ದರ ಸ್ಥಿರವಿದೆಯೆನ್ನಲಾಗಿದೆ. ಅಕ್ಟೋಬರ್ ತಿಂಗಳ 27 ರ ತನಕ 297000 ಟನ್ ಜೋಳ ದೇಶದಲ್ಲಿ ಆವಕವಾಗಿದ್ದು ಇದೇ ಅವಧಿಯಲ್ಲಿ ಹಿಂದಿನ ವರ್ಷದ ಆವಕದಿಂದ 34.4 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಅಂತ್ಯದಲ್ಲಿ ಹೆಚ್ಚಿನ ಮಳೆಯಿಂದ ವಿಳಂಬಿತ ಕಟಾವು ಆವಕ ಇಳಿಕೆಗೆ ಕಾರಣವಾಗಿರಬಹುದು. ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಪೂರೈಕೆಯಾಗುವ ಪ್ರಮಾಣದೊಂದಿಗೆ ದರ ವ್ಯತ್ಯಾಸವಾಗುವ ಸಾಧ್ಯತೆಯಿದೆ.

## ಖಾರೀಫ್ 2022 ರ ಸೋಯಾಬೀನ್ ಉತ್ಪಾದನೆ 12 ಮಿಲಿಯನ್ ಟನ್‌ಗಳಾಗುವ ಸಾಧ್ಯತೆ

ಭಾರತದಲ್ಲಿ 2022 ಖಾರೀಫ್ ಬೆಳೆಯ ಸೋಯಾಬೀನ್ ಉತ್ಪಾದನೆ 12 ಮಿಲಿಯನ್ ಟನ್‌ಗಳಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಇದರೊಂದಿಗೆ 1.5 ಮಿಲಿಯನ್ ಟನ್‌ಗಳಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಇದರೊಂದಿಗೆ 1.5 ಮಿಲಿಯನ್ ಟನ್ ಗಳ ವರ್ಷಾಂತ್ಯದ ದಾಸ್ತಾನು ಇರಲಿದೆಯೆನ್ನಲಾಗಿದೆ. ಮಾರುಕಟ್ಟೆಯಲ್ಲಿ ದರ ಕನಿಷ್ಠ ಬೆಂಬಲ ಬೆಲೆಯ ಸಮೀಪ ಬರುವ ಸಾಧ್ಯತೆಯಿದೆಯೆನ್ನಲಾಗಿದೆ. ಜಾಗತಿಕ ಖಾದ್ಯತೈಲ ಬೆಲೆಗಳು ಹಿಂದಿನ ಕೆಲವು ತಿಂಗಳಿಂದ ಇಳಿಕೆಯಾಗಿದ್ದು ಈಗ ಮತ್ತೆ ಹೆಚ್ಚಳ ಕಾಣುತ್ತಿದೆ. ಖಾದ್ಯತೈಲಗಳ ದರವನ್ನುಸರಿಸಿ ಸೋಯಾಬೀನ್ ಹಾಗೂ ಅದರ ಉತ್ಪಾದನೆಗಳ ದರ ವ್ಯತ್ಯಾಸವಾಗಬಹುದು.